

> ನಾವು ಎಷ್ಟೇ ಸಿದ್ಧಾಂತಗಳನ್ನು ಮಾತಾಡುತ್ತಿದ್ದರೂ, ಬರೆಯಲು ಕೂತಾಗ, ಹಾಡಲು ಕೂತಾಗ, ಸಿನಿಮಾ ಮಾಡಲು ಕೂತಾಗ ಆ ಥಿಯರಿಗಳೆಲ್ಲ ಹಿಂದಕ್ಕೆ ಹೋಗಿಬಿಟ್ಟಿರುತ್ತದೆ. ಒಳಗಿನಿಂದ ಏನೋ ಹುಟ್ಟುತ್ತಿರುತ್ತದಲ್ಲ, ಅದಷ್ಟೇ ಮುನ್ನಲೆಗೆ ಬರುತ್ತಿರುತ್ತದೆ.
>
> –ಗಿರೀಶ ಕಾಸರವಳ್ಳಿ

**ವರ್ಷಗಳ ನಂತರ ನಿಮಗೆ ಅದನ್ನು ಸಿನಿಮಾ ಮಾಡಬೇಕು ಅನಿಸಲು ಕಾರಣವೇನು?**

ಬಹಳ ವರ್ಷಗಳ ಹಿಂದೆಯೇ ಈ ಕಥೆಯನ್ನು ಓದಿದ್ದೆ. ಮೊದಲ ಓದಿಗೇ ಇಂಪ್ರೆಸ್ ಮಾಡಿತ್ತು. ಜಯಂತರ ಎಲ್ಲ ಕಥೆಗಳಲ್ಲಿಯೂ ಇರುವ ಹಾಗೆಯೇ ಇಲ್ಲಿಯೂ ನೇರವಾದ ಯಾವುದೇ ಬಗೆಯ ಸಮಾಜೋ–ರಾಜಕೀಯ ಅಂಶಗಳು ಕಾಣಿಸುವುದಿಲ್ಲ. ಆದರೆ ಅದರ ಆಳದಲ್ಲಿ ಅವು, ನಮ್ಮ ಈವತ್ತಿನ ಇರುವಿಕೆಯ ಬಗೆಗೆ ಪ್ರಶ್ನೆ ಮಾಡುತ್ತಿರುತ್ತವೆ. ಆಗಲೇ ನನಗೆ ಇದನ್ನು ಸಿನಿಮಾ ಮಾಡಬೇಕು ಅನಿಸಿತ್ತು. ಆದರೆ ಒಂದು ಫುಲ್ ಲೆಂಥ್ ಫೀಚರ್ ಫಿಲ್ಮ್‌ಗೆ ಈ ಕಥೆ ಸಾಲುವುದಿಲ್ಲ ಎಂಬ ಕಾರಣಕ್ಕೆ ಹಾಗೇ ಬಿಟ್ಟಿದ್ದೆ. ತುಂಬ ಜನರ ಬಳಿ ಈ ಕಥೆಯನ್ನು ಒಳ್ಳೆಯ ಸಿನಿಮಾ ಮಾಡಬಹುದು ಎಂದು ಹೇಳುತ್ತಿದ್ದೆ. ಆಮೇಲೆ ಕಿರುಚಿತ್ರ ಮಾಡೋಣ ಎಂದೇ ನಾನು ಕೆಲಸ ಮಾಡಲು ಶುರುಮಾಡಿದೆ. ಆಗ ನನಗೆ ಈ ಕಥೆಯ ಇನ್ನೊಂದು ಸಾಧ್ಯತೆ ಕಾಣಿಸಿತು. ಅದರ ಮೇಲೆ ಕೆಲಸ ಮಾಡಿ ಈ ಕಥೆಯ ಸ್ಕ್ರಿಪ್ಟ್ ರಚಿಸಿದೆ.

◆ **ನಿಮ್ಮ ಬಹುತೇಕ ಸಿನಿಮಾಗಳು ಸಾಹಿತ್ಯಕೃತಿ ಆಧರಿಸಿವೆ. ಆದರೆ ಅವುಗಳೆಲ್ಲವೂ ಮೂಲಕೃತಿಗಿಂತ ಭಿನ್ನವಾಗಿವೆ. ಈ ಸಿನಿಮಾದಲ್ಲಿಯೂ ಹಾಗೆಯೇ ಇರುತ್ತದೆಯೇ?**

ಇದರಲ್ಲಿ ಮೂಲಕಥೆಗೆ ಬಹಳ ನಿಷ್ಠವಾಗಿಯೇ ಇದ್ದೇನೆ. ಆದರೆ ಅದರಲ್ಲಿನ ಮುಖ್ಯ ಪಾತ್ರಕ್ಕೆ ಒಂದು ಹಿನ್ನೆಲೆ ಇದ್ದಿದ್ದರೆ ಏನಾಗಬಹುದಿತ್ತು ಎಂದು ಯೋಚಿಸಿ ನಾನೇ ಮತ್ತೊಂದು ಕಥೆ ಬರೆದುಕೊಂಡಿದ್ದೇನೆ. ನಾಯಕ ಒಂದು ನಗರದ ಕಾರ್ಪೊರೇಟ್ ಜಗತ್ತಿಗೆ ಬಂದಿದ್ದಾನೆ. ಯಾವ ಬಗೆಯ ತೊಳಲಾಟ ಮತ್ತು ಮಾನಸಿಕ ಒತ್ತಡಗಳಿಂದ ಅವನು ಬಂದಿರಬಹುದು ಎಂದು ಯೋಚಿಸಿ ಮತ್ತೊಂದು ಕಥೆ ಬರೆದುಕೊಂಡಿದ್ದೇನೆ. ಅವನು ಹಳ್ಳಿಯಲ್ಲಿ ಇದ್ದಾಗ ಏನಾಗಿತ್ತು; ಸಿಟಿಗೆ ಬಂದಾಗ ಏನಾಗುತ್ತದೆ ಎಂಬುದನ್ನು ಸಿನಿಮಾ ಹೇಳುತ್ತದೆ. ಹಾಗಾಗಿ ಇದಕ್ಕೆ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಎಂದು ಶೀರ್ಷಿಕೆ ಇಟ್ಟೆ.

'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಎನ್ನುವುದು ಈವತ್ತಿನ ನಮ್ಮೆಲ್ಲರ ಸಮಸ್ಯೆಯೂ ಹೌದು. ಅದು ಪುರಂದರದಾಸರ ಸಾಲು. ತುಂಬ ತಾತ್ವಿಕವಾದ ದರ್ಶನ ಅದರಲ್ಲಿದೆ. ನಮ್ಮ ಸಾಮಾಜಿಕ ಪರಿಸ್ಥಿತಿಯಲ್ಲಿ, ರಾಜಕೀಯ ಪರಿಸ್ಥಿತಿ ಎಲ್ಲದರಲ್ಲಿಯೂ ಈ ತೊಳಲಾಟ ಇದ್ದೇ ಇದೆ. ಪೂರ್ಣತೃಪ್ತಿ ಅನ್ನುವುದು ಬಹುಶಃ ಮನುಷ್ಯ ಸ್ವಭಾವದಲ್ಲಿಯೇ ಇಲ್ಲವೇನೋ. ಹಾಗಿರುವುದರಿಂದಲೇ ನಮಗೆ ಹುಡುಕಾಟಗಳು ಇರುತ್ತವೆ. 'ಹಾಲಿನ ಮೀಸೆ' ಕಥೆಯೂ ಬಹಳ ಸೂಕ್ಷ್ಮವಾಗಿ ಅದನ್ನು ಹೇಳುತ್ತದೆ.

◆ **ಸಿನಿಮಾ ಮಾಧ್ಯಮದ ಮ್ಯಾಜಿಕ್ ಇರುವುದು ಎಲ್ಲಿ? ಕಥೆ, ಚಿತ್ರಕಥೆ, ನಟನೆ, ತಾಂತ್ರಿಕತೆ ಹೀಗೆ ಯಾವುದರಲ್ಲಿ ಸಿನಿಮಾ ಮಾಧ್ಯಮದ ಸಾಧ್ಯತೆಗಳಿವೆ?**

ಕೊನೆಗೂ ಒಂದು ಸಿನಿಮಾ ಅನುಭವವನ್ನು ಹೇಗೆ ಕಟ್ಟಿಕೊಡುತ್ತದೆ ಎನ್ನುವುದರ ಮೇಲೆಯೇ ಅದರ ಯಶಸ್ಸು ನಿಂತಿದೆ. ಅನುಭವ ಯಾವ್ಯಾವುದೋ ರೀತಿಯಲ್ಲಿ ಕಟ್ಟಿಕೊಡಬಹುದು; ಒಂದರಿಂದಲೇ ಅದು ಆಗುವುದಲ್ಲ. ಒಂದರಿಂದಲೇ ಅದು ಸ್ಫುರಿಸುವುದಾದರೆ ಅದು ಸಿನಿಮಾ ಆಗುತ್ತಲೇ ಇರಲಿಲ್ಲ. ಒಬ್ಬ ಪಾಶ್ಚಾತ್ಯ ಸಿನಿಮಾಕರ್ತ ಹೇಳುವ ಮಾತು ಚೆನ್ನಾಗಿದೆ. 'ಸಿನಿಮಾವನ್ನು ಅನುಭವಿಸುವುದು ಸುಲಭ; ವಿವರಿಸುವುದು ಕಷ್ಟ' ಎಂದು ಹೇಳುತ್ತಾನೆ. ಯಾಕೆಂದರೆ ಸಿನಿಮಾ ನಮಗೆ ಕೊಡುವ ಅನುಭವಗಳ ಮೂಲ ಎಲ್ಲಿದೆ ಎಂದು ಗೊತ್ತಾಗುವುದಿಲ್ಲ. ಸಂಗೀತ ಕೇಳಿದಾಗ ಅದರ ಅನುಭವದ ಮೂಲ ಯಾವುದು ಗೊತ್ತಾಗುತ್ತದೆ. ಸಾಹಿತ್ಯದಲ್ಲಿಯೂ ಅದು ತಿಳಿಯುತ್ತದೆ. ಸಿನಿಮಾದಲ್ಲಿ ಹಾಗಲ್ಲ. ಇಲ್ಲಿ ಅದು ಸಂಕಲನದಿಂದ ಹುಟ್ಟಿರಬಹುದು, ದೃಶ್ಯ ಜೋಡಣೆಯಿಂದ ಹುಟ್ಟಿರಬಹುದು, ನಟನೆಯಿಂದ ಹುಟ್ಟಿರಬಹುದು... ಇವೆಲ್ಲವೂ ಒಟ್ಟೊಟ್ಟಿಗೇ ಅನುಭವವನ್ನು ಸ್ಫುರಿಸುತ್ತಿರುತ್ತವೆ. ಹೀಗೆ ಎಲ್ಲದಿಂದಲೂ ಅನುಭವ ಹುಟ್ಟದೇ ಇದ್ದಾಗ ಸಿನಿಮಾ ಅಪರಿಪಕ್ವವಾಗಿ ಉಳಿಯುತ್ತದೆ.

◆ **'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಸಿನಿಮಾ ಈಗ ಯಾವ ಹಂತದಲ್ಲಿದೆ?**

ಸಿನಿಮಾ ಪೂರ್ಣಗೊಂಡಿದೆ. ಸೆನ್ಸಾರ್ ಮಂಡಳಿಯವರು ಸದ್ಯವೇ ನೋಡುತ್ತಾರೆ. ಈ ಚಿತ್ರದ ಅರ್ಧಭಾಗವನ್ನು ಬೆಂಗಳೂರಿನಲ್ಲಿಯೇ ಚಿತ್ರೀಕರಿಸಿದ್ದೇವೆ. ಇನ್ನರ್ಧ ಭಾಗ ಮಲ್ಪೆಯ ಹತ್ತಿರದ ಒಂದು ಊರಿನಲ್ಲಿ ಚಿತ್ರೀಕರಿಸಿದ್ದೇವೆ. ಹೆಚ್ಚಿನ ಕಲಾವಿದರು ಹೊಸಬರು. ಯಾವ ಜನಪ್ರಿಯ ಕಲಾವಿದರೂ ಇಲ್ಲ. ಸ್ಥಳೀಯ ಕಲಾವಿದರನ್ನೇ ಬಳಸಿಕೊಂಡಿದ್ದೇವೆ.

◆ **ಇಂದಿನ ಸಿನಿಮಾವನ್ನು ಮುನ್ನಡೆಸುತ್ತಿರುವ ಚಾಲಕಶಕ್ತಿ ಯಾವುದು? ಅದರಲ್ಲಿ ಏನಾದರೂ ಬದಲಾವಣೆ ಆಗಿದೆಯಾ?**

ವ್ಯಾವಹಾರಿಕ ಕಾರಣಗಳಲ್ಲದೆ, ಸಿನಿಮಾವನ್ನು ಒಂದು ಭಾಷೆಯಾಗಿ, ಮಾಧ್ಯಮವಾಗಿ ನೋಡಿದಾಗ ಕಳೆದ ಇಪ್ಪತ್ತು ವರ್ಷಗಳಲ್ಲಿ ಸಿನಿಮಾ ತುಂಬ ಬದಲಾವಣೆ ಕಾಣುತ್ತಿದೆ. ಕಟ್ಟುವ ಕ್ರಮ, ಪರಿಭಾವಿಸುವ ಕ್ರಮ ಮತ್ತು ಇಡೀ ಏಸ್ತಟಿಕ್ಸ್ ಬದಲಾಗುತ್ತಿದೆ. ಇದುವರೆಗೆ ಸಿನಿಮಾ ದೃಶ್ಯಮಾಧ್ಯಮ ಎಂದಿತ್ತಲ್ಲ, ಅದನ್ನು ಮೀರಿ ಈಗ ಸಿನಿಮಾ ಒಂದು ಟೆಂಪರ್, ಅಂದರೆ ಕಾಲದ ಮೂಲಕ ಕಟ್ಟುವ ಕೃತಿ ಎನ್ನುವುದನ್ನು ಈವತ್ತು ಕೇಳುತ್ತಿದ್ದೇವೆ. ಆದರೆ ಪ್ರೇಕ್ಷಕನಿಗೆ ಅನುಭವ ಪಡೆದುಕೊಳ್ಳಲು ಅದು ಮುಖ್ಯ ಆಗುವುದಿಲ್ಲ. ಆದರೆ, ಸಿನಿಮಾ ಕಟ್ಟುವವನಿಗೆ ಅದು ದೊಡ್ಡ ಕಾಣ್ಕೆಯಾಗಿ ಕಾಣುತ್ತದೆ. ನನಗೆ ಆ ಸಿದ್ಧಾಂತ ಗೊತ್ತೇ ಹೊರತು ಅದರ ಕುರಿತು ಹೆಚ್ಚು ಪ್ರಾಯೋಗಿಕವಾಗಿ ಅನ್ವಯಿಸಿಕೊಳ್ಳಲು ಹೋಗುವುದಿಲ್ಲ. ಕೊನೆಗೂ ಒಂದು ರಸವನ್ನು ಹೇಗೆ ಹುಟ್ಟಿಸುವುದು ಮತ್ತು ಅನುಭವವನ್ನು ಹೇಗೆ ಸೃಷ್ಟಿಮಾಡುವುದು ಎಂಬುದರ ಕುರಿತು ನಾನು ಯೋಚಿಸುತ್ತೇನೆ.

ಎಲ್ಲ ಕಲೆಗಳಲ್ಲಿಯೂ ಹಾಗೆ, ನಾವು ಮಾತನಾಡುವಾಗ ಬೇರೆ ಏನೇನೋ ಮಾತಾಡುತ್ತಿರುತ್ತೇವೆ. ಆದರೆ ಕೃತಿ ರಚನೆಗೆ ಕೂತಾಗ ನಮ್ಮ ಹೃದಯ ಏನು ಹೇಳುತ್ತದೆಯೋ ಅದನ್ನು ಅನುಸರಿಸಿಕೊಂಡು ಹೋಗುತ್ತಿರುತ್ತೇವೆ. ನಾವು ಆಡುವ ಮಾತುಗಳು, ಕೃತಿ ರಚನೆಯ ಸಂದರ್ಭದಲ್ಲಿ ಒಳಗಿನಿಂದ ಸ್ಫುರಿಸಬೇಕಲ್ಲ...

ಸಂಗೀತಗಾರರು ಇದನ್ನು ಬಹಳ ಚೆನ್ನಾಗಿ ಹೇಳುತ್ತಾರೆ. 'ಆ ಕ್ಷಣದಲ್ಲಿ ಆ ಕೇಳುಗರ ಜೊತೆಗೆ ಹೇಗೆ ಸಂವಾದಿಸಬೇಕು ಅನಿಸುತ್ತದೆಯೋ ಹಾಗೆ ಹಾಡುತ್ತೇವೆ' ಎಂದು. ಅದು ಎಲ್ಲಿ ಹುಟ್ಟುತ್ತದೆ, ಹೇಗೆ ಹುಟ್ಟುತ್ತದೆ ಎಂದು ಕಂಡುಹಿಡಿಯಲು ಸಾಧ್ಯವಿಲ್ಲ. ಎಷ್ಟೋ ಸಾಹಿತಿಗಳಲ್ಲಿಯೂ ನಾನು ಇದನ್ನು ಕಂಡಿದ್ದೇನೆ. ನಾವು ಎಷ್ಟೇ ಸಿದ್ಧಾಂತಗಳನ್ನು ಮಾತಾಡುತ್ತಿದ್ದರೂ, ಬರೆಯಲು ಕೂತಾಗ, ಹಾಡಲು ಕೂತಾಗ, ಸಿನಿಮಾ ಮಾಡಲು ಕೂತಾಗ ಆ ಥಿಯರಿಗಳೆಲ್ಲ ಹಿಂದಕ್ಕೆ ಹೋಗಿಬಿಟ್ಟಿರುತ್ತವೆ. ಒಳಗಿನಿಂದ ಏನೋ ಹುಟ್ಟುತ್ತಿರುತ್ತದಲ್ಲ, ಅದಷ್ಟೇ ಮುನ್ನಲೆಗೆ ಬರುತ್ತಿರುತ್ತದೆ. ಯಾಕೆಂದರೆ ನಮ್ಮ ಬುದ್ಧಿಯ ಜೊತೆಗೆ ಹೃದಯದ ಮಾತನ್ನೂ ಕೇಳುತ್ತ ಇದ್ದಾಗ ನಾವು ಕಟ್ಟುವ ಕಲಾಕೃತಿ ಚೆನ್ನಾಗಿರುತ್ತದೆ.

ಬರೀ ಬುದ್ಧಿಯಿಂದ ಕಟ್ಟಿದರೆ ಜೀವಂತಿಕೆ ಇರುವುದಿಲ್ಲ, ಬರೀ ಹೃದಯದಿಂದ ಕಟ್ಟಿದರೆ ಅದಕ್ಕೆ ಬೇರೆ ಆಯಾಮಗಳು ಇರುವುದಿಲ್ಲ. ನಮ್ಮ ಕನ್ನಡ ಕಲಾಲೋಕದಲ್ಲಿ ಇದನ್ನು ಮತ್ತೆ ಮತ್ತೆ ಬಳಸುತ್ತಿರುತ್ತೇವೆ. 'ಬುದ್ಧಿ–ಭಾವದ ಸಂಗಮ' ಆದಾಗಲೇ ಒಳ್ಳೆಯ ಕೃತಿ ಸೃಷ್ಟಿಯಾಗುತ್ತದೆ. ಅದೇ ಸರಿಯಾದ ಕ್ರಮ ಎಂದು ನಾನೂ ತಿಳಿದುಕೊಂಡಿದ್ದೇನೆ.

■